WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2008

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758    ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102.    ☎ 2520754
ಸಂಪುಟ–8    ಸಂಚಿಕೆ–12    ಪುಟಗಳು–6    Registered Under No.J/UDP/1260/2009-2011 Dated from 01-12-2008 to 30-11-2011.

## ಸೌಂದರ್ಯಲಹರೀ ಕೋಟ್ಯರ್ಚನೆ ಪಾರಾಯಣ–ಸಂಪನ್ನ




ನಾಡಿನ ಜನರನ್ನು ಆಧ್ಯಾತ್ಮಿಕವಾಗಿ ಎಚ್ಚರಿಸುವ, ಒಂದುಗೂಡಿಸುವ ಹಾಗೂ ಮುನ್ನಡೆಸುವ ನಿಟ್ಟಿನಲ್ಲಿ ವೇದಾಂತ ಭಾರತಿಯು ಹಮ್ಮಿಕೊಂಡ ಸೌಂದರ್ಯಲಹರೀ ಕೋಟ್ಯರ್ಚನಾ ಕಾರ್ಯಕ್ರಮವು ನಾಡಿನಾದ್ಯಂತ ದಶಂಬರ್ 2ರಿಂದ 8ನೇ ತಾರೀಕಿನ ವರೆಗೆ ನಡೆಯಿತು.

ಉಡುಪಿಯಲ್ಲಿ ಈ ಕಾರ್ಯಕ್ರಮವನ್ನು ಜ್ಞಾನಭಾರತೀ (ರಿ.), ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಮತ್ತು ಹವ್ಯಕ ಸಭಾ (ರಿ.) ಇವರ ಸಂಯೋಜಕತ್ವದಲ್ಲಿ ಏರ್ಪಡಿಸಲಾಯಿತು. ದಶಂಬರ್ 2ರಿಂದ ದಶಂಬರ್ 8ರ ವರೆಗೆ ಸಂಜೆ ಗಂಟೆ 4ರಿಂದ 5–30ರ ವರೆಗೆ ಸುಮಾರು 75 ಮಂದಿ ಮಾತೆಯರು ಮತ್ತು ಪುರುಷರು ಸೌಂದರ್ಯಲಹರೀ ಪಾರಾಯಣದಲ್ಲಿ ಭಾಗವಹಿಸಿದ್ದರು. ದಶಂಬರ್ 2ರಂದು ಸಂಜೆ 4ಗಂಟೆಗೆ ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದ ಜ್ಞಾನಮಂದಿರದಲ್ಲಿ ಪಾರಾಯಣಕ್ಕಾಗಿ ನೆರೆದ ಮಾತೆಯರು ಮತ್ತು ಪುರುಷರು ''ಕಿಂ ಜ್ಯೋತಿಸ್ತವ ಭಾನುಮಾನಹನಿ ಮೇ ರಾತ್ರೌ ಪ್ರದೀಪಾದಿಕಂ'' ಎಂಬ ಶ್ಲೋಕ ಹೇಳುತ್ತ ದೀಪ ಬೆಳಗಿಸಿ ಸೌಂದರ್ಯಲಹರೀ ಪಾರಾಯಣಕ್ಕೆ ಚಾಲನೆ ನೀಡಿದರು. ಇದೇ ರೀತಿ ಎಲ್ಲಾ ದಿನಗಳಲ್ಲೂ ಪಾರಾಯಣ ನಡೆಯಿತು. ದಶಂಬರ್ 6ರಂದು ಸಂಜೆ ಪಾರಾಯಣ ಕಾರ್ಯಕ್ರಮದ ಬಳಿಕ ಶಂಕರನಾಮ–ಪರಿಕ್ರಮವನ್ನಾಚರಿಸಲಾಯ್ತು. ಅಲಂಕರಿಸಲ್ಪಟ್ಟ ವಾಹನದ ಮೇಲೆ ಶ್ರೀಶಾರದಾ ದೇವಿ ಮತ್ತು ಆದಿಶಂಕರಾಚಾರ್ಯರ ಭಾವಚಿತ್ರ ವನ್ನಿರಿಸಿ, ಪೂಜೆ ಮಾಡಿ ಶ್ರೀಶಂಕರ ವಿರಚಿತ ಚರ್ಪಟ ಪಂಜರಿಕಾ ಸ್ತೋತ್ರ ಮತ್ತು ಇತರ ಸ್ತೋತ್ರಗಳನ್ನು ಹೇಳುತ್ತಾ ಶ್ರೀ ಸುಧೀಂದ್ರತೀರ್ಥ ಮಾರ್ಗದಿಂದ ಲಾಲಾಲಜಪತ್‌ರಾಯ್ ಮಾರ್ಗದ ಮೂಲಕ ಸುಮಾರು 100ಕ್ಕೂ ಮಿಕ್ಕಿದ ಪುರುಷರು ಮತ್ತು ಮಾತೆಯರ ಪರಿಕ್ರಮ ಶೋಭಾಯಮಾನವಾಗಿ ನೆರವೇರಿತು. ಮಾರ್ಗದ ಇಕ್ಕೆಲಗಳ ನಿವಾಸಿಗಳು ಮನೆಗಳೆದುರು ರಂಗವಲ್ಲಿ ಬಿಡಿಸಿ, ನಂದಾದೀಪವಿಟ್ಟು ಶ್ರೀಶಾರದಾ ದೇವಿ ಮತ್ತು ಆದಿಶಂಕರಾಚಾರ್ಯರಿಗೆ ಆರತಿ ಬೆಳಗಿ, ನಮಿಸಿ ಧನ್ಯತಾಭಾವ ತೋರಿದರು.

### ಅಖಂಡ ಪಾರಾಯಣ

ದಶಂಬರ್ 7ರಂದು ಸೌಂದರ್ಯಲಹರೀ ಅಖಂಡ ಪಾರಾಯಣ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5ರ ವರೆಗೆ ಕುಂಜಿಬೆಟ್ಟಿನ ಸುಧೀಂದ್ರತೀರ್ಥ ಮಂಟಪದಲ್ಲಿ ನಡೆಯಿತು. 100ಕ್ಕೂ ಮಿಕ್ಕಿ ಮಾತೆಯರು ಮತ್ತು ಪುರುಷರು ಈ ಅಖಂಡ ಪಾರಾಯಣದಲ್ಲಿ ಭಾಗವಹಿಸಿದ್ದರು. ನಂತರ ಮೆರವಣಿಗೆಯಲ್ಲಿ ಶಾರದಾ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿ, ಪ್ರಸಾದ ವಿತರಿಸಲಾಯಿತು. ದಶಂಬರ್ 8ರಂದು ಸೋಮವಾರ ಶ್ರೀಶಾರದಾ ದೇವಸ್ಥಾನದಲ್ಲಿ ಸಪ್ತಾಹದ ಕೊನೆಯ ದಿನದ ಪಾರಾಯಣ ನಡೆದು ಶ್ರೀಶಾರದಾ ದೇವಿ ಹಾಗೂ ಆದಿಶಂಕರರಿಗೆ ಶೋಡಷೋಪಚಾರ ಪೂಜೆ ನಡೆಯಿತು.

ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಶ್ರೀಶಂಕರ ನಮನದ ಬಳಿಕ ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಸಂಸ್ಕೃತ ಪ್ರಾಚಾರ್ಯರಾದ ಪ್ರೊ। ವಸುಮತಿ ಭಟ್ಟರು ಶಂಕರಾಚಾರ್ಯರ ಹುಟ್ಟು, ಬಾಲ್ಯ, ಸನ್ಯಾಸ ಸ್ವೀಕಾರ, ಸಾಹಿತ್ಯ–ಗ್ರಂಥರಚನೆ, ಚತುರಾಮ್ನಾಯ ಪೀಠ ಸ್ಥಾಪನೆ, ಅಖಂಡ ಭರತಖಂಡವನ್ನು ಸನಾತನ ಧರ್ಮದಡಿ ಮರು ಸಂಘಟಿಸಿ ಹಿಂದೂ ಧರ್ಮದ ಪುನರುತ್ಥಾನ ಮಾಡಿದ ಕುರಿತು ಪ್ರವಚನ ನೀಡಿದರು. ಜ್ಞಾನಭಾರತಿಯ ಅಧ್ಯಕ್ಷ ಶ್ರೀ ಸಿ.ಎಸ್.ರಾಯರು ಅಧ್ಯಕ್ಷೀಯ ಭಾಷಣ ಮಾಡಿದರು. ಆರಂಭದಲ್ಲಿ ಕಾರ್ಯದರ್ಶಿ ಡಾ। ಎಸ್.ಎಲ್. ಕರಣಿಕರು ಪ್ರಸ್ತಾವನೆ ಮಾಡಿ ಸ್ವಾಗತಿಸಿದರು. ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ವೇಣುಗೋಪಾಲರಾವ್ ವಂದಿಸಿದರು. ಜ್ಞಾನ ಭಾರತೀಯ ಉಪಾಧ್ಯಕ್ಷರಾದ ಡಾ। ಉಪ್ಪಂಗಳ ರಾಮಭಟ್ ಮತ್ತು ಡಾ। ಎಮ್.ಆರ್.ಹೆಗಡೆ ವೇದಿಕೆಯಲ್ಲಿದ್ದರು. ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಭಕ್ತರು ಧನ್ಯತೆಯಿಂದ ಪುನೀತರಾದರು.

ಉಡುಪಿ ತಾಲೂಕಿನ ಬಾರ್ಕೂರು ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ಹಂಗಾರಕಟ್ಟೆ ಬಾಳೆಕುದ್ರು ಮಠ, ಕೋಟ ಶ್ರೀ ಗುರುನರಸಿಂಹ ದೇವಸ್ಥಾನಗಳಲ್ಲೂ ದಿನಗಳ ಸೌಂದರ್ಯ ಲಹರೀ ಕೋಟ್ಯರ್ಚನೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

## 2009–ಹೊಸ ವರ್ಷದ ಶುಭಾಶಯಗಳು

ನಮ್ಮ ಮೆಚ್ಚಿನ ಶ್ರೀಶಾರದಾ ಮಾಸ ಪತ್ರಿಕೆಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಯುವವೇದಿಕೆ, ಮಹಿಳಾ ವೇದಿಕೆ ಮತ್ತು ಇತರ ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಗ್ರಾಹಕರಿಗೆ, ಪತ್ರಿಕೆಗೆ ಆಕರ್ಷಕ ವಿನ್ಯಾಸ ಮೂಡಿಸಿ ಅಂದವಾಗಿ ಮುದ್ರಿಸಿದ ಶ್ರೀನಿಧಿ ಕಂಪ್ಯೂಟರ್ ಗ್ರಾಫಿಕ್ಸ್ ಮತ್ತು ಅಗ್ರಹಾರ ಆಫ್‌ಸೆಟ್ಸ್ ಇವರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಕತ್ವವನ್ನು ನೀಡಿದ ಅಭಿಮಾನಿಗಳಿಗೆ ಮತ್ತು ಪ್ರೀತಿಯ ಓದುಗರಿಗೆ ''2009–ಹೊಸ ವರ್ಷ'' ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.

–ಸಂಪಾದಕ ಮಂಡಳಿ

## ವಿದ್ಯಾರ್ಥಿವೇತನ ವಿತರಣೆ

ಅಕ್ಟೋಬರ್‌ನಲ್ಲಿ ನಡೆದ ವಿಜಯ ದಶಮಿ ಆಚರಣೆ ಸಂದರ್ಭದಲ್ಲಿ 2007–2008ನೇ ಸಾಲಿನ ವಿದ್ಯಾರ್ಥಿ ವೇತನವನ್ನು ಒಟ್ಟು 94 ವಿದ್ಯಾರ್ಥಿಗಳಿಗೆ (ರೂ.37,400/-) ನೀಡಲಾಗಿದೆ. ವಿದ್ಯಾರ್ಥಿಗಳ ರಕ್ಷಕರ ವಿಳಾಸಕ್ಕೆ ವಿದ್ಯಾರ್ಥಿವೇತನದ ಮೊಬಲಗನ್ನು ಎಂ.ಓ. ಮೂಲಕ ಕಳುಹಿಸಲಾಗಿದೆ.

– ಕಾರ್ಯದರ್ಶಿ

## ಮೈಸೂರು ಕ್ರಿಕೆಟ್ ಪಂದ್ಯಾಟ : ಬೆಳ್ತಂಗಡಿ–ವಿನ್ನರ್ಸ್ ಮತ್ತು ಉಡುಪಿ–ರನ್ನರ್ಸ್‌ಅಪ್

ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ (ರಿ.) ಮೈಸೂರು ಇದರ ವತಿಯಿಂದ ದಿನಾಂಕ 30–11–2008ನೇ ಭಾನುವಾರ ನಮ್ಮ ಸಮಾಜ ಬಾಂಧವರಿಗಾಗಿ ಅಂತರವಲಯ ಕ್ರಿಕೆಟ್ ಟೂರ್ನಿಯನ್ನು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಸಲಾಯಿತು. ಅತಿಥೇಯ ಮೈಸೂರಿನಿಂದ 4 ಟೀಮುಗಳು, ಬೆಂಗಳೂರಿನಿಂದ 1, ಮಂಗಳೂರಿನಿಂದ 1, ಬೆಳ್ತಂಗಡಿಯಿಂದ 2, ಉಡುಪಿಯಿಂದ 2 ಹಾಗೂ ಹಿರಿಯಡ್ಕದಿಂದ 1 ಹೀಗೆ ಒಟ್ಟು 11 ಟೀಮುಗಳು ಈ ಟೂರ್ನಿಯಲ್ಲಿ ಪಾಲುಗೊಂಡಿದ್ದು, ಇದರೊಂದಿಗೆ ನಮ್ಮ ಸಮಾಜದ ಮಹಿಳೆಯರಿಗಾಗಿ ತ್ರೋಬಾಲ್ ಮ್ಯಾಚನ್ನು ಕೂಡಾ ನಡೆಸಲಾಯಿತು. ಅಲ್ಲದೆ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕಾ ಸಭಾ (ರಿ.) ಮೈಸೂರು ಇದರ ವಾರ್ಷಿಕ ಕ್ರೀಡಾ ಕೂಟವನ್ನೂ ಅಂದೇ ನಡೆಸಲಾಯಿತು. ಪೂರ್ವಾಹ್ನ 9–00 ಗಂಟೆಗೆ ಸರಿಯಾಗಿ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು. ಪ್ರಾರ್ಥನೆಯನ್ನು ಶ್ರೀಮತಿ ಉಷಾ ತಾಳಪ್ಪಾಡಿಯವರು ನೇರವೇರಿಸಿಕೊಟ್ಟರು. ಅತಿಥಿ ಹಾಗೂ ಅಭ್ಯಾಗತರನ್ನು ಶ್ರೀ ಕೆ. ರಾಮಮೂರ್ತಿ ರಾವ್‌ರವರು ಸ್ವಾಗತಿಸಿದರು. ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಅಧ್ಯಕ್ಷರಾದ ಉಮೇಶ್ ರಾವ್ ಎರ್ಮಾಳು ರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎವರೆಸ್ಟ್ ವೀರ ಶ್ರೀ ಗಣೇಶ್‌ರವರು, ಶ್ರೀ ಟಿ.ಸಿ. ರಾಯರು ಹಾಗೂ ಶ್ರೀ ಪಿ. ರಾಧಾಕೃಷ್ಣ ರಾಯರು ಹಾಗೂ ಜ್ಞಾನಸರೋವರ ಇಂಟರ್‌ನ್ಯಾಶನಲ್ ಸ್ಕೂಲಿನ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿಯವರು ಆಗಮಿಸಿದ್ದರು. ಅತಿಥಿಗಳು ದೀಪಬೆಳಗುವುದರೊಂದಿಗೆ ಕ್ರೀಡೆಯ ಉದ್ಘಾಟನೆಯನ್ನು ನಡೆಸಲಾಯಿತು.

ಮೊದಲು ಹನ್ನೊಂದು ತಂಡಗಳನ್ನು 3 ವಿಭಾಗಗಳಾಗಿ ಮಾಡಿ ರೌಂಡ್‌ರೋಬಿನ ಪದ್ಧತಿಯಲ್ಲಿ ಆಡಿಸಲಾಯಿತು. ಕ್ವಾರ್ಟರ್ ಫೈನಲ್ಸ್, ಸೆಮಿ ಫೈನಲ್ಸ್ ಮತ್ತು ಫೈನಲ್ಸ್‌ನ್ನು ನಾಕೌಟ್ ಬೇಸಿಸ್‌ನಲ್ಲಿ ಆಡಿಸಲಾಯಿತು. ಫೈನಲ್ಸ್‌ನಲ್ಲಿ ಬೆಳ್ತಂಗಡಿ ಟೀಮಿನವರು ವಿನ್ನರ್ಸ್ ಆಗಿಯೂ ಉಡುಪಿ ಟೀಮಿನವರು ರನ್ನರ್ಸ್ ಆಗಿಯೂ ಮಿಂಚಿದರು. ಈ ಎಲ್ಲಾ ಪಂದ್ಯಗಳಿಗೆ ನ್ಯೂಟ್ರಲ್ ಅಂಪಾಯರ್ಸ್‌ನ್ನು ನೇಮಕ ಮಾಡಲಾಗಿತ್ತು. 6 ಮಂದಿ ಟಿಬೇಟಿಯನ್ ಮೂಲದವರು ಅಂಪಾಯರ್ಸ್‌ಗಳಾಗಿ ಸಹಕರಿಸಿದರು. ಇವರಿಗೆ ವಂದನೆಗಳು. ಮಹಿಳಾ ತ್ರೋಬಾಲ್ ಪಂದ್ಯಗಳು ಹಾಗೂ ನಮ್ಮ ಸಂಘದ ವಾರ್ಷಿಕ ಕ್ರೀಡಾಕೂಟವನ್ನು ನಡೆಸಿಕೊಟ್ಟವರು ಶ್ರೀಮತಿ ಸಾವಿತ್ರಿಗಿರೀಶ್‌ರವರು. ಇವರಿಗೂ ಸಂಘವು ಚಿರಋಣಿಯಾಗಿದೆ.

ಈ ಕ್ರಿಕೆಟ್‌ಟೂರ್ನಿ ಬರೇ ಒಂದು ಕ್ರಿಕೆಟ್ ಪಂದ್ಯವಲ್ಲ. ಇದು ನಮ್ಮೆಲ್ಲರ 'ಗೆಟ್‌ಟುಗೆದರ್'. ಬೆಳಿಗ್ಗೆಯಿಂದ ಸಂಜೆಯ ತನಕ ನಮ್ಮವರೆಲ್ಲ ಸೇರಿ ಉಭಯಕುಶಲೋಪರಿ ನಡೆಸಿ ಸಂತೋಷಪಡಲು ಇದೊಂದು ಸದಾವಕಾಶ. ಬೆಳಗ್ಗಿನ ಉಪಾಹಾರ, ನಡುವೆ ಮಜ್ಜಿಗೆ, ಮಧ್ಯಾಹ್ನದ ಊಟ ಹಾಗೂ ಸಂಜೆ ಕಾಫಿ–ತಿಂಡಿ ಎಲ್ಲವೂ ಇಲ್ಲೇ. ಬೆಳಗ್ಗಿನ ಉಪಾಹಾರದ ಪ್ರಾಯೋಜಕರು ಆನಂದ ರಾವ್ ಆ್ಯಂಡ್ ಸನ್ಸ್ ಕೇಟರರ್ಸ್ ಮೈಸೂರು. ಇವರಿಗೆ ಸಂಘವು ಚಿರಋಣಿ. ಮಧ್ಯಾಹ್ನ ಊಟದ ಪ್ರಾಯೋಜಕರು ಶ್ರೀ ಪಿ. ರಾಧಾಕೃಷ್ಣ ರಾಯರು. ಇವರಿಗೂ ಸಂಘವು ಆಭಾರಿಯಾಗಿದೆ. ಅಲ್ಲದೆ ಹತ್ತು–ಹಲವಾರು ಮಹನೀಯರು ಹಾಗೂ ಮಹಿಳೆಯರು ಈ ಕ್ರೀಡಾ ಕೂಟಕ್ಕೆ ಮುಕ್ತಮನಸ್ಸಿನಿಂದ ದೇಣಿಗೆ ನೀಡಿದ್ದಾರೆ. ಇವರೆಲ್ಲರಿಗೂ ತುಂಬುಹೃದಯದ ಕೃತಜ್ಞತೆಗಳು. ಈ ಕ್ರಿಕೆಟ್ ಟೂರ್ನಿಯು ಇಷ್ಟು ಅಚ್ಚುಕಟ್ಟಾಗಿ ನಡೆಯಲು ಹಲವರ ಸಹಕಾರವಿದೆ. ಸುಮಾರು ಒಂದುವಾರ ಇವರೆಲ್ಲರೂ ಹಗಲುರಾತ್ರಿ ಇದಕ್ಕಾಗಿ ದುಡಿದಿದ್ದಾರೆ. ನಮ್ಮ ಸಭಾದ ಕಾರ್ಯದರ್ಶಿ ಶ್ರೀ ಗಣೇಶ ಅಧಿಕಾರಿ, ಯುವಘಟಕದ ಅಧ್ಯಕ್ಷ ಶ್ರೀ ಆನಂದ ಕುಮಾರ್, ಶ್ರೀ ಎಂ.ಆರ್. ಜಗದೀಶ ರಾವ್ ಅಲ್ಲದೆ ಹಲವು ಯುವಕರು ಈ ಟೂರ್ನಿಗಾಗಿ ದುಡಿದಿದ್ದಾರೆ. ಇವರೆಲ್ಲರಿಗೂ ಸಂಘವು ಋಣಿಯಾಗಿದೆ.

ಈ ಕ್ರಿಕೆಟ್ ಟೂರ್ನಿಯ ಬಹುಮಾನ ವಿತರಣಾ ಸಮಾರಂಭವು ಸಂಜೆ 7–00 ಗಂಟೆಗೆ ಡಾ. ರಾಜಾರಾಮ ಶಾಸ್ತ್ರಿ ಯವರಿಂದ ನೆರವೇರಲ್ಪಟ್ಟಿತು. ಮೊದಲನೆಯ ಬಹುಮಾನಗಳಿಸಿದ ಬೆಳ್ತಂಗಡಿ ಟೀಮು ಮತ್ತು ಎರಡನೆಯ ಬಹುಮಾನಗಳಿಸಿದ ಉಡುಪಿ ಟೀಮಿನವರಿಗೆ ಡಾ. ರಾಜಾರಾಮ ಶಾಸ್ತ್ರಿಯವರು ಬಹುಮಾನ ವಿತರಣೆಗೈದರು. ಪಂದ್ಯ ಪುರುಷೋತ್ತಮನಾಗಿ ಬೆಳ್ತಂಗಡಿ ಟೀಮಿನ ಶ್ರೀ ಮನೋಜ್ ಅವರು ಆಯ್ಕೆಯಾದರು. ಅವರಿಗೂ ವಿಶೇಷ ಬಹುಮಾನವನ್ನು ನೀಡಲಾಯಿತು.

ವರದಿ : ಉಮೇಶ ರಾವ್ ಎರ್ಮಾಳು.

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿ ಕಾರ್ಯದರ್ಶಿಯಾಗಿ ಶ್ರೀ ವೇಣುಗೋಪಾಲರಾವ್

ಉಡುಪಿಯ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕಾರ್ಯದರ್ಶಿಯಾಗಿದ್ದ ಶ್ರೀ ವೈ.ಭುವನೇಂದ್ರರಾಯರು ರಾಜೀನಾಮೆ ನೀಡಿ ತೆರವಾದ ಸ್ಥಾನಕ್ಕೆ ಕಾರ್ಯಕಾರಿ ಮಂಡಳಿಯು ಸಂಘದ ಜೊತೆ ಕಾರ್ಯದರ್ಶಿಯಾಗಿದ್ದ ಶ್ರೀ ವೇಣುಗೋಪಾಲ ರಾವ್, ಅಂಬಲ್ಪಾಡಿ ಇವರನ್ನು ಸರ್ವಾನುಮತದಿಂದ ಮುಂದಿನ ಕಾರ್ಯದರ್ಶಿಯಾಗಿ ಆರಿಸಿದೆ.